# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 327
2) ಸದಸ್ಯರ ಹೆಸರು : ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸಬೇಕಾದ ದಿನಾಂಕ : 10-12-2025
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಮೀನು ಉತ್ಪಾದನೆ ಹೆಚ್ಚಿಸಲು ತೆಗೆದುಕೊಂಡಿರುವ ಕ್ರಮಗಳೇನು; ರಾಜ್ಯದಲ್ಲಿರುವ ಮೀನು ಮಾರಾಟ ಕೇಂದ್ರಗಳೆಷ್ಟು ಹಾಗೂ ಕೆ.ಎಫ್.ಡಿ.ಸಿ.ಯಲ್ಲಿ ರಾಜ್ಯದಲ್ಲಿರುವ ಹೋಟೆಲ್‌ಗಳ ಸಂಖ್ಯೆ ಎಷ್ಟು; | ಕರ್ನಾಟಕದಲ್ಲಿ ಮೀನು ಉತ್ಪಾದನೆ ಹೆಚ್ಚಿಸಲು ಕೆಳಕಂಡಂತೆ ಹಲವು ಕಾರ್ಯಕ್ರಮ / ಯೋಜನೆಗಳನ್ನು ರೂಪಿಸಲಾಗಿರುತ್ತದೆ:-<br><br>• ಜಲಾಶಯ / ಕೆರೆಗಳನ್ನು ಗುತ್ತಿಗೆ ಪಡೆದ ಮೀನುಗಾರರ ಸಹಕಾರ ಸಂಘಗಳು / ಮೀನುಗಾರರಿಗೆ ಉತ್ತಮ ತಳಿಯ ಬಲಿತ ಬಿತ್ತನೆ ಮೀನುಮರಿಗಳನ್ನು ಇಲಾಖೆಯಿಂದ ನೀಡಲಾಗುವುದು.<br>• ಮೀನುಗಾರರಿಗೆ ಮತ್ತು ಮೀನು ಕೃಷಿಕರಿಗೆ ಮೀನು ಇಳುವರಿಯನ್ನು ಹೆಚ್ಚಿಸಿ ಕೊಳ್ಳಲು ಅಳವಡಿಸಿಕೊಳ್ಳಬೇಕಾದ ನೂತನ ಪದ್ಧತಿಗಳ ಬಗ್ಗೆ ತರಬೇತಿ ಹಾಗು ಇಲಾಖಾ ಅಧಿಕಾರಿಗಳ ಕ್ಷೇತ್ರ ಭೇಟಿ ಮುಖಾಂತರ ಅರಿವು ಮೂಡಿಸಲಾಗುತ್ತಿದೆ.<br>• ಆಧುನಿಕ ಹಾಗು ಸುಧಾರಿತ ಮೀನು ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಮೀನು ಇಳುವರಿಯನ್ನು ಹೆಚ್ಚಿಸಿಕೊಳ್ಳಲು ಸಹಾಯಧನ ನೀಡುವ ಮುಖಾಂತರ ಪ್ರೋತ್ಸಾಹಿಸಲಾಗುವುದು.<br><br>ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು ಈ ಸಂಸ್ಥೆಯು ಸರ್ಕಾರದ ಅಧೀನದಲ್ಲಿ ಬರುವ ಸಾರ್ವಜನಿಕ ಉದ್ದಿಮೆಯಾಗಿರುತ್ತದೆ. ರಾಜ್ಯದಲ್ಲಿ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲಾಗುತ್ತಿರುವ ಮೀನು ಮಾರಾಟ ಕೇಂದ್ರಗಳ ಸಂಖ್ಯೆ ಮತ್ಸ್ಯದರ್ಶಿನಿಗಳ ಸಂಖ್ಯೆ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಮೀನು ಮಾರಾಟ ಮಳಿಗೆಗಳ ವಿತರಣೆಯಲ್ಲಿ ಮೀಸಲಾತಿಯನ್ನು ಅನುಸರಿಸಲಾಗುತ್ತಿದೆಯೇ; ಅನುಸರಿಸುತ್ತಿದ್ದರೆ ಎಸ್.ಸಿ., ಎಸ್.ಟಿ., ಒಬಿಸಿಗಳಿಗೆ ನೀಡಲಾಗಿರುವ ಮಳಿಗೆಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಮೀನು ಮಾರಾಟ ಮಳಿಗೆಗಳನ್ನು ಫ್ರಾಂಚೈಸಿ ಮಾದರಿಯಲ್ಲಿ ಸ್ಥಾಪಿಸಲು ಇಚ್ಛಿಸುವ ಎಲ್ಲಾ ವರ್ಗದ ಜನರಿಗೆ ಫ್ರಾಂಚೈಸಿ ನೀಡಲಾಗುತ್ತಿರುವ ಕಾರಣ ಯಾವುದೇ ರೀತಿಯಲ್ಲಿ ಗುರಿಗಳನ್ನು ನಿಗದಿಪಡಿಸಿರುವುದಿಲ್ಲ. ಹೀಗಾಗಿ ಮೀಸಲಾತಿ ನಿಗದಿಪಡಿಸಿರುವುದಿಲ್ಲ. |
| ಇ) | ಕೆ.ಎಫ್.ಡಿ.ಸಿ. ಅಡಿಯಲ್ಲಿ ನಡೆಸುತ್ತಿರುವ ಮೀನು ಊಟದ ಹೋಟೆಲ್‌ಗಳನ್ನು ರಾಜ್ಯವ್ಯಾಪಿ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ಮಾಹಿತಿ ನೀಡುವುದು) | ಪ್ರಸ್ತುತ ಕೋಲಾರ, ತುಮಕೂರು, ಬೆಂಗಳೂರು ಹಾಗೂ ಮಂಗಳೂರಿನಲ್ಲಿ ನಿಗಮವು ಮತ್ಸ್ಯದರ್ಶಿನಿಗಳನ್ನು ನಡೆಸುತ್ತಿದ್ದು, ಮೈಸೂರಿನಲ್ಲಿ ಮತ್ಸ್ಯದರ್ಶಿನಿಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ. ರಾಜ್ಯದ ಇತರೆ ಸ್ಥಳಗಳಲ್ಲಿ ಆಸಕ್ತರಿಗೆ ಮತ್ಸ್ಯದರ್ಶಿನಿ ಮೀನು ಊಟದ ಹೋಟೆಲ್‌ಗಳನ್ನು ಫ್ರಾಂಚೈಸಿ ಮಾದರಿಯಲ್ಲಿ ಪ್ರಾರಂಭಿಸಲು ಅವಕಾಶವಿರುತ್ತದೆ. |

ಸಂಖ್ಯೆ: ಪಸಂಮೀ ಇ-195 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಿವಕುಮಾರ್. ಕೆ ರವರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 337ಗೆ **ಅನುಬಂಧ-1**

| ನಿಗಮದ ಮೂಲಕ ನಡೆಸುತ್ತಿರುವ ವಿವರ | | | ಲೈಸೆನ್ಸ್ ಆಧಾರದ ಮೇಲೆ ನಡೆಸುತ್ತಿರುವ ವಿವರ | | ಏಜೆನ್ಸಿ ರೂಪದಲ್ಲಿ ನಡೆಸುತ್ತಿರುವ ವಿವರ | |
|---|---|---|---|---|---|---|
| ಮೀನು ಮಾರಾಟ ಕೇಂದ್ರ | ಮತ್ಸ್ಯದರ್ಶಿನಿ | ಮೊಬೈಲ್ ಕ್ಯಾಂಟೀನ್ | ಮೀನು ಮಾರಾಟ ಕೇಂದ್ರ | ಮತ್ಸ್ಯದರ್ಶಿನಿ | ಮೀನು ಮಾರಾಟ ಕೇಂದ್ರ | ಮತ್ಸ್ಯದರ್ಶಿನಿ |
| 4 | 6 | 1 | 6 | 0 | 21 | 7 |

ಮೀನುಗಾರಿಕೆ ನಿರ್ದೇಶಕರು